**ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನರೇಂದ್ರ ಆರ್. (ಹನೂರು), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1657 ಕ್ಕೆ ಉತ್ತರ**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಚಾಮರಾಜನಗರ ಜಿಲ್ಲೆಗೆ 2014-15ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ ಮಂಜೂರು ಮಾಡಿರುವ ಸಮುದಾಯ ಭವನಗಳೆಷ್ಟು(ವಿವರ ಒದಗಿಸುವುದು);</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2014-15ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಚಾಮರಾಜನಗರ ಜಿಲ್ಲೆಗೆ ಒಟ್ಟು 46 ಸಮುದಾಯ ಭವನಗಳನ್ನು ಮಂಜೂರು ಮಾಡಲಾಗಿದೆ. (ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ).</td></tr>
<tr><td>ಆ</td><td>ಈ ಪೈಕಿ ಪ್ರಸಕ್ತ ಸಾಲಿನಲ್ಲಿ ಹೊಸ ಭವನಗಳ ನಿರ್ಮಾಣ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ;</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಚಾಮರಾಜನಗರ ಜಿಲ್ಲೆಗೆ ಮಂಜೂರು ಮಾಡಿರುವ 46 ಸಮುದಾಯ ಭವನಗಳ ಪೈಕಿ 4 ಸಮುದಾಯ ಭವನಗಳನ್ನು 2016-17ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ. ಇನ್ನೂ 3 ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಮಂಜೂರಾತಿಗಾಗಿ ಪರಿಶೀಲನೆಯಲ್ಲಿದ್ದು, ಸದರಿ ಪ್ರಸ್ತಾವನೆಗಳಿಗೆ ಅನುದಾನ ಮಂಜೂರು ಮಾಡಲು 2016-17ನೇ ಸಾಲಿನಲ್ಲಿ ಅನುದಾನ ಲಭ್ಯತೆ ಇರುವುದಿಲ್ಲ. (ವಿವರಗಳನ್ನು ಅನುಬಂಧ-2 ಮತ್ತು 4ರಲ್ಲಿ ಒದಗಿಸಲಾಗಿದೆ).</td></tr>
<tr><td>ಇ</td><td>ಈ ಭವನಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಅಪೂರ್ಣಗೊಂಡಿರುವ ಭವನಗಳೆಷ್ಟು (ಸಂಪೂರ್ಣ ಸ್ಥಳ ವಿವರ ಒದಗಿಸುವುದು) ;</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2014-15ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಚಾಮರಾಜನಗರ ಜಿಲ್ಲೆಗೆ ಸಮುದಾಯ ಭವನ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರು ಮಾಡಿ, ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ)</th><th>ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ)</th><th>ಬಿಡುಗಡೆಗೆ ಬಾಕಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ)</th><th>ಮಂಜೂರಾತಿ ಭವನಗಳ ಸಂಖ್ಯೆ</th><th>ಪ್ರಗತಿಯಲ್ಲಿರುವ ಭವನಗಳ ಸಂಖ್ಯೆ</th><th>ಕಾಮಗಾರಿ ಪ್ರಾರಂಭಸದೇ ಇರುವ ಭವನಗಳ ಸಂಖ್ಯೆ</th></tr>
<tr><td>1</td><td>1053.75</td><td>444.68</td><td>609.07</td><td>46</td><td>39</td><td>07</td></tr>
</table>
ಚಾಮರಾಜನಗರ ಜಿಲ್ಲೆಗೆ ಮಂಜೂರಾತಿ ನೀಡಿರುವ 46 ಸಮುದಾಯ ಭವನಗಳ ಪೈಕಿ 39 ಸಮುದಾಯ ಭವನ ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇನ್ನೂ 7 ಸಂಘ-ಸಂಸ್ಥೆಗಳು ಸಮುದಾಯ ಭವನ ಕಟ್ಟಡಗಳ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. (ವಿವರಗಳನ್ನು ಅನುಬಂಧ-1 ಮತ್ತು 3ರಲ್ಲಿ ಒದಗಿಸಲಾಗಿದೆ.)</td></tr>
<tr><td>ಈ</td><td>ಈ ಪೈಕಿ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. (ಸಂಪೂರ್ಣ ವಿವರ ಒದಗಿಸುವುದು)?</td><td>ಸದರಿ ಸಮುದಾಯ ಭವನ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ ಅನುದಾನದ ಶೇಕಡ 25 ರಷ್ಟು ಅನುದಾನವನ್ನು ಮೊದಲನೇ ಕಂತಿನಲ್ಲಿ ಬಿಡುಗಡೆ ಮಾಡಿದ್ದು, ಸದರಿ ಅನುದಾನವನ್ನು ಬಳಕೆ ಮಾಡಿ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಕಟ್ಟಡದ ಕಾಮಗಾರಿಯ ಪ್ರಗತಿ ಛಾಯಾಚಿತ್ರಗಳನ್ನು ಸಲ್ಲಿಸಿದಲ್ಲಿ, 2017-18ನೇ ಸಾಲಿನಲ್ಲಿ ಅನುದಾನ ಲಭ್ಯತೆಗೆ ಒಳಪಟ್ಟು 2 ಮತ್ತು 3ನೇ ಕಂತಿನ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗುವುದು.</td></tr>
</table>

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು,